(ಈ) ಈ 12 ಪ್ರಸ್ತಾವನೆಗಳಿಗೆ ಒಪ್ಪಿಗೆ ಮಾಡಿದಲ್ಲಿ, ಈ ಕೆಳಕಂಡ ಪ್ರವಾಸಿ ತಾಣಗಳಲ್ಲಿ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲಾಗುವುದು.

ವಾಣಿವಿಲಾಸ ಸಾಗರ, ಗೋಕರ್ಣ, ಪಿಲಿಕುಳ ನಿಸರ್ಗಧಾಮ, ಆಲಮಟ್ಟಿ ಅಣೆಕಟ್ಟು, ಗುಲ್ಬರ್ಗಾ, ಬೀದರ್, ಶಿವನಸಮುದ್ರ, ಮೈಸೂರು, ಬಳ್ಳಾರಿ ಕೋಟೆ.

(ಉ) ಕೇಂದ್ರ ಸರ್ಕಾರದಲ್ಲಿ ಬಾಕಿಯಿರುವ ಪ್ರಸ್ತಾವನೆಗಳಲ್ಲಿ ಭಾಲ್ಕಿ ಮತ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಆದರೆ ಈಗಾಗಲೇ ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರ ಕಾರಂಜಾ ಅಣೆಕಟ್ಟಿನ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸಲು ಕೇಂದ್ರದ ನೆರವನ್ನು ಪಡೆಯಲಾಗಿದೆ. ಈ ಪ್ರದೇಶದಲ್ಲಿ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಸರ್ವೆ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ಬೋರ್‌ವೆಲ್‌ಗಳನ್ನು ಕೊರೆಯುವುದು.

327 (298) ಶ್ರೀ ಜಾರ್ಜ್ ಕೆ.ಜೆ. (ಸರ್ವಜ್ಞನಗರ) :– ಮಾನ್ಯ ವಸತಿ ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾವೇರಿ ನೀರಿನ ಅಭಾವ ಬಹಳ ಹೆಚ್ಚಾಗಿರುವುದರಿಂದ ಸುಮಾರು 60 ಬೋರ್‌ವೆಲ್‌ಗಳನ್ನು ಕೊರೆಯುವ ಬಗ್ಗೆ ಸಲ್ಲಿಸಿದ ಪ್ರಸ್ತಾವನೆ ಯಾವ ಹಂತದಲ್ಲಿದೆ (ವಿವರ ನೀಡುವುದು) ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ ವಾರ್ತಾ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):–

(ಅ) ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2008 ಮತ್ತು 2009ರಲ್ಲಿ ಮೊದಲನೇ ಹಂತವಾಗಿ 8 ಬೋರ್‌ವೆಲ್‌ಗಳನ್ನು ಹಾಗೂ ಎರಡನೇ ಹಂತದಲ್ಲಿ 42 ಬೋರ್‌ವೆಲ್‌ಗಳನ್ನು ಕೊರೆಯಲಾಗಿದೆ.

ಮಾನ್ಯ ಶಾಸಕರಾದ ಶ್ರೀ. ಕೆ.ಜೆ. ಜಾರ್ಜ್‌ರವರು 60 ಬೋರ್‌ವೆಲ್‌ಗಳನ್ನು ಕೊರೆಸಲು ಪ್ರಸ್ತಾವನೆ ಸಲ್ಲಿಸಿದ ನಂತರ 55 ಬೋರ್‌ವೆಲ್‌ಗಳನ್ನು ಕೊರೆಸಲಾಗಿದ್ದು ಇವುಗಳಲ್ಲಿ ಈಗಾಗಲೇ 48 ಬೋರ್‌ವೆಲ್‌ಗಳು ಚಾಲನೆಯಲ್ಲಿದೆ. ಉಳಿದ 7 ಬೋರ್‌ವೆಲ್‌ಗಳನ್ನು ಕೆಲವೇ ದಿನಗಳಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಿ ಚಾಲನೆಗೊಳಿಸಲಾಗುವುದು. ಇನ್ನು ಮುಂದೆಯೂ 20 ಹೊಸ ಬೋರ್‌ವೆಲ್‌ಗಳನ್ನು ಹೆಚ್ಚುವರಿಯಾಗಿ ಕೊರೆಯಲಾಗುವುದು.

ಪತ್ರಿಕಾ ಛಾಯಾಗ್ರಾಹಕರ ಮೇಲೆ ಹಲ್ಲೆ.

330 (666) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) :– ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಕಾರ್ಕಳ ನಗರ ಪೊಲೀಸ್ ಠಾಣೆಯಲ್ಲಿ ಇರುವ ಸಬ್–ಇನ್ಸ್‌ಪೆಕ್ಟರ್ ಎಷ್ಟು ಸಮಯದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ ?

(ಆ) ಅವರು ಪತ್ರಿಕಾ ಛಾಯಾಗ್ರಾಹಕರೊಬ್ಬರನ್ನು ಇತ್ತೀಚೆಗೆ ಅನಾವಶ್ಯಕವಾಗಿ ಠಾಣೆಗೆ ಕರೆದುಕೊಂಡು ಹೋಗಿ ತೀವ್ರ ಹಲ್ಲೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಈ ಸಬ್–ಇನ್ಸ್ ಪೆಕ್ಟರ್ ವಿರುದ್ಧ ಈ ಪ್ರಕರಣವಲ್ಲದೆ ಈ ಹಿಂದೆ ಇಂತಹ ದೂರುಗಳು ಬಂದಿದ್ದು, ಅವುಗಳ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಲಾಗಿದೆ.

(ಈ) ಈ ಛಾಯಾಗ್ರಾಹಕರ ಮೇಲೆ ನಡೆದ ಹಲ್ಲೆಯ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆ?

(ಉ) ಈ ಹಿಂದೆ ಈ ಸಬ್–ಇನ್ಸ್‌ಪೆಕ್ಟರ್ ಎಷ್ಟು ಬಾರಿ ಇಲಾಖೆಯ ಶಿಕ್ಷೆಗೊಳಗಾಗಿದ್ದಾರೆ?

ಶ್ರೀ ಡಾ ವಿ.ಎಸ್ ಆಚಾರ್ಯ (ಗೃಹ ಮತ್ತು ಮುಜರಾಯಿ ಸಚಿವರು) :–

(ಅ) ಶ್ರೀ ರಾಮಚಂದ್ರ ನಾಯಕ್ ಇವರು ಕಾರ್ಕಳ ನಗರ ಠಾಣೆಯಲ್ಲಿ ಸಬ್–ಇನ್ಸ್ ಪೆಕ್ಟರ್ ಆಗಿ ದಿ: 28–07–2008 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

(ಆ) ದಿನಾಂಕ: 28–04–2010 ರಂದು ರಾತ್ರಿ ಗಸ್ತಿನಲ್ಲಿದ್ದ ಶ್ರೀ ರಾಮಚಂದ್ರ ನಾಯಕ್, ಪಿ.ಎಸ್.ಐ. ರವರು ಕಾರ್ಕಳ ಸ್ವಾಗತ್ ಬಾರ್ ಅಂಡ್ ರೆಸ್ಟೋರೆಂಟ್ ಎದುರಿನಲ್ಲಿ ರಾತ್ರಿ 12.00 ಗಂಟೆಗೆ ಅನುಮಾನಾಸ್ಪದವಾಗಿ ವರ್ತಿಸುತ್ತಿದ್ದ ಕಾರ್ಕಳದ ದ್ವಾರಕಾ ಸ್ಟುಡಿಯೋದಲ್ಲಿ ಛಾಯಾಗ್ರಾಹಕರಾಗಿ ಕೆಲಸ ಮಾಡಿಕೊಂಡಿರುವ ಶ್ರೀ ಗಿರೀಶ್ ದೇವಡಿಗಾ ಮತ್ತು ಇತರೆ ಇಬ್ಬರನ್ನು ವಿಚಾರಣೆಗಾಗಿ ಕಾರ್ಕಳ ನಗರ ಪೊಲೀಸ್ ಠಾಣೆಗೆ ಕರೆತಂದು ವಿಚಾರಣೆ ಮಾಡಿದ್ದು, ಸದರಿ ಗಿರೀಶ್ ರವರಲ್ಲಿ ಪತ್ರಿಕಾ ಛಾಯಾಗ್ರಾಹಕರೆಂಬ ಬಗ್ಗೆ ಯಾವುದೇ ದಾಖಲಾತಿ ಇರಲಿಲ್ಲ. ಆದರೆ 3 ಬಂಗಾರ ಅಡವಿಟ್ಟ ದಾಖಲೆ ದೊರತಿದ್ದು, ಸೂಕ್ತ ವಿವರಣೆ ನೀಡದಿದ್ದಾಗ ಎಡಕೆನ್ನೆಗೆ ಕೈಯಿಂದ ಹೊಡೆದ ಘಟನೆ ನಡೆದಿರುತ್ತದೆ. ಈ ಬಗ್ಗೆ ಡಿ.ವೈ.ಎಸ್.ಪಿ. ಕಾರ್ಕಳ ಉಪ ವಿಭಾಗದವರು ವಿಚಾರಣೆ ನಡೆಸಿರುತ್ತಾರೆ.

(ಇ) ಸದರಿ ಇನ್ಸ್‌ಪೆಕ್ಟರ್‌ರವರ ವಿರುದ್ಧ ಈ ಪ್ರಕರಣವಲ್ಲದೆ ಈ ಹಿಂದೆ ಇಂತಹ ದೂರುಗಳು ಬಂದಾಗ ಇಲಾಖಾ ಶಿಸ್ತು ಕ್ರಮಕ್ಕೆಗೊಳ್ಳಲಾಗಿದೆ ಹಾಗೂ ದಂಡನೆಯನ್ನು

ವಿಧಿಸಲಾಗಿದೆ

(ಈ) ಶ್ರೀ ರಾಮಚಂದ್ರ ನಾಯಕ್, ಪಿ.ಎಸ್.ಐ.ರವರು ಛಾಯಾಗ್ರಾಹಕರ ಮೇಲೆ ಹಲ್ಲೆ ನಡೆಸಿದ ಘಟನೆಯ ಹಿನ್ನಲೆಯಲ್ಲಿ ಡಿ.ವೈ.ಎಸ್.ಪಿ. ಕಾರ್ಕಳ ಉಪವಿಭಾಗದವರ ವಿಚಾರಣಾ ವರದಿಯ ಹಿನ್ನಲೆಯಲ್ಲಿ ಅವರ ವಿರುದ್ಧ ಇಲಾಖಾ ಶಿಸ್ತು ಕ್ರಮಕೈಗೊಂಡು ಕೆ.ಎಸ್.ಪಿ.ಡಿ.ಪಿ. ನಿಯಮ 7 ರಂತೆ ದಿ: 08-06-2010 ರಂದು ದೋಷಾರೋಪಣಾ ಪಟ್ಟಿ ನೀಡಲಾಗಿದೆ. ಸದರಿಯವರು ದೋಷಾರೋಪಣಾ ಪತ್ರವನ್ನು ದಿ: 14-06-2010 ರಂದು ಸ್ವೀಕರಿಸಿದ್ದು. ದಿ: 21-06-2010 ರಲ್ಲಿ ಸದರಿಯವರಿಗೆ ದಾಖಲೆಗಳನ್ನು ಒದಗಿಸಲಾಗಿದೆ. ಸದರಿಯವರಿಂದ ವಿವರಣೆ ಪಡೆದ ನಂತರ ಪರಿಶೀಲಿಸಿ ಅಂತಿಮ ಆದೇಶ ಹೊರಡಿಸಲಾಗುವುದು.

(ಉ) ಶ್ರೀ ರಾಮಚಂದ್ರ ನಾಯಕ್, ಸಬ್-ಇನ್ಸ್‌ಪೆಕ್ಟರ್ ಇವರು ಈ ಹಿಂದೆ 7 ಬಾರಿ ಇಲಾಖೆಯ ಶಿಕ್ಷೆಗೊಳಗಾಗಿದ್ದಾರೆ.

ಸೈಬರ್ ಕ್ರೈಂ ಪೊಲೀಸರ ಕಾರ್ಯ ನಿರ್ವಹಣೆ.

333 (612) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) :- ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಕಳೆದ ಎರಡು ವರ್ಷಗಳಲ್ಲಿ ಪತ್ತೆ ಹಚ್ಚಿದ ಅಥವಾ ದಾಖಲಾದ ಸೈಬರ್ ಕ್ರೈಂಗಳ ಸಂಖ್ಯೆ ಎಷ್ಟು ?

(ಆ) ಇಂಟರ್‌ನೆಟ್‌ಗೆ ಸಂಬಂಧಪಟ್ಟ ಎಲ್ಲಾ ಅಪರಾಧಗಳ ತನಿಖೆಯ ವ್ಯಾಪ್ತಿಯು ಸೈಬರ್ ಕ್ರೈಂ ಬ್ರಾಂಚಿಗೆ ಬರುವುದರಿಂದ ಆಧುನಿಕ ತಂತ್ರಜ್ಞಾನವನ್ನು ಹೊಂದಿರುವ ಮತ್ತು ನುರಿತ ಸಿಬ್ಬಂದಿ ವರ್ಗವನ್ನು ಹೊಂದಿರುವ ವ್ಯವಸ್ಥಿತ ಕಾರ್ಯಾಲಯವನ್ನು ಇಲಾಖೆಯು ಹೊಂದಿರುತ್ತದೆಯೇ?

(ಇ) ಸಾಕಷ್ಟು ಸೈಬರ್ ಕ್ರೈಂಗಳು ದಾಖಲಾಗದೇ ಉಳಿದುಕೊಳ್ಳಲು ಕಾರಣವಾಗುತ್ತಿದೆ ಎಂಬುದು ನಿಜವೇ?

(ಈ) ಹಾಗಿದ್ದಲ್ಲಿ ಸೂಕ್ತ ಕಾನೂನು ನಿಯಮಗಳ ವ್ಯಾಪ್ತಿ ಮತ್ತು ಇರುವ ಕಾನೂನುಗಳ ಹೊಂದಾಣಿಕೆಯೊಂದಿಗೆ ಅಪರಾಧಗಳ ಪತ್ತೆ ಹಚ್ಚಲು ಸರ್ಕಾರದ ಕ್ರಮಗಳೇನು?

ಶ್ರೀ ಡಾ ವಿ.ಎಸ್ ಆಚಾರ್ಯ (ಮಾನ್ಯ ಗೃಹ ಮತ್ತು ಮುಜರಾಯಿ ಸಚಿವರು) :-

(ಅ) ಕ್ರಮ ವರ್ಷ ಪತ್ತೆ ಹಚ್ಚಿದ/ದಾಖಲಾದ ಸೈಬರ್